ದಿನಾಂಕ ೩02–08–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಹೆಚ್ ಡಿ ವಕೀಲರಿಂದಃ**

ಶವ ಪಂಚನಾಮೆ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ಎಂ ಆರ್ ನಂ. ಹೆಚ್ 22 / 2022-23 ದೃಡಿಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಸರ್ವೇ ನಂ. 157 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರ ಪರ ಃ ಶ್ರೀ ಕೆವಿಪಿ ವಕೀಲರಿಂದಃ**

ನನಗೆ ಅಪಗಾತವಾದ ದಿನಾಂಕ ಹೇಳಲಾಗುವುದಿಲ್ಲ. ಅಪಗಾತವು ರಾಯಚೂರು - ಹೈದ್ರಾಬಾದ್ ರಸ್ತೆಯ ಶಕ್ತಿನಗರ ಬಳಿ 2 ನೇ ಕ್ರಾಸ್ ಬಳಿ ಆಗಿರುತ್ತದೆ. ನನ್ನ ಗಂಡ ದ್ರಿಚಕ್ರ ವಾಹನ ಮೇಲೆ ಬರುತ್ತಿದಾಗ ಹಿಂದಿನಿಂದ ಲಾರಿ ಬಂದು ಡಿಕಿಪಡಿಸಿ ಅಪಗಾತವಾಗಿರುತ್ತದೆ. ನನ್ನ ಗಂಡ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ನಂಬರ ನನಗೆ ಹೇಳಲಾಗುವುದಿಲ್ಲ. ಅಪಗಾತವಾದ ಪಡಿಸಿದ ಲಾರಿಯ ನಂಬರ ಹೇಳಲಾಗುವುದಿಲ್ಲ. ನನ್ನ ಗಂಡನಿಗೆ ಟಿವಿಎಸ್ ಮೋ. ಸೈ. ನಡೆಸಲು ಬರುತ್ತಿರಲ್ಲಿಲ್ಲ ಮತ್ತು ಅವರಿಗೆ ವಾಹನ ಚಾಲನ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ನನ ಗಂಡನಿಗೆ ವಾಹನ ಚಾಲನೆ ಮಾಡಲು ಬರದೇ ಇದುದ್ದರಿಂದ ಅವರೇ ಲಾರಿಗೆ ಡಿಕಿಪಡಿಸಿ ಅಪಗಾತಕಿಡಾಗಿರುತಾರೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಅಪಗಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದಲೇ ಅಪಗಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ವಿರುದ್ದ ವಾಹನ ಚಾಲನ ಪರವಾಗೆ ಇಲದೇ ವಾಹನ ಚಲಾಯಿಸಿದ್ದರಿಂದ ಪೂಲಿಸರು ದೋಷರೋಪಣ ಪತ್ರ ಸಲಿಸಿದಾರೆ ಎಂದರೆ ಸರಿಯಲ್ಲ. ಟಿವಿಎಸ್ ದ್ವಿಚಕ್ರ ವಾಹನ ನನ್ನ ಗಂಡನ ಹೆಸರಿನ ಮೇಲೆ ಇತ್ತು. ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ.

ಲಾರಿ ಚಾಲಕನಿಗೆ ಚಾಲನ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ಯಾವುದೇ ಪರ್ಮಿಟ್ , ಪಿಟನೆಸ್ ಸರ್ಟಿ ಪಿಕೇಟ್ ಇರಲಿಲ್ಲ ಎಂದರೆ ಗೊತ್ತಿಲ್ಲ. ಅಪಗಾತವಾದ ಸಮಯದಲ್ಲಿ ನನ್ನ ಗಂಡನಿಗೆ 50 ವರ್ಷ ಪ್ರಾಯ ಇತ್ತು. ನನ್ನ ಗಂಡ

ಒಕ್ಕಲುತನ ಮಾಡಿ ವರ್ಷಕ್ಕೆ 5 ಲಕ್ಷ ಆದಾಯ ಸಂಪಾದಿಸುತಿದ್ದರು ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ. ಅದೆ ರೀತಿ ಪ್ರತಿ ತಿಂಗಳು ನನ ಗಂಡ ಗೌಂಡಿ ಕೆಲಸ ಮಾಡಿ 30 ಸಾವಿರ ಆದಾಯ ಪಡೆಯುತ್ತಿದ್ದ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಶಕ್ತಿನಗರ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ದುಡಿದು ಆದಾಯ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ದೊಡ್ಡ ಮಗಳ ಮದುವೆಯಾಗಿರುತ್ತದೆ. ನನ್ನ ಇನ್ನೊಬ್ಬ ಮಗಳ ಮದುವೆ ಆಗಿರುವುದಿಲ್ಲ. ಅವಳು ನಮ್ಮ ಜೊತೆಗೆ ಇದ್ದಾಳೆ. ನಾನು ಮತುತ ನನ ಮಕ್ಕಳು ಕೆಲಸ ಮಾಡಿ ನಮ್ಮ ದಿನನಿತ್ಯದ ಕರ್ಚನ್ನು ನಿಬಾಯಿಸಿಕೊಂಡು ಹೋಗುತ್ತಿದೇವೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನನ್ನ ಗಂಡನ ಆದಾಯದ ಮೇಲೆ ನಾವು ಅವಲಿಂಬತರಾಗಿದೆವೆ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮರಣ ನಂತರ ನಾನು ನಮ್ಮ ಕುಟುಂಬದ ಜಮೀನನ್ನು ಸಾಗುವಳಿ ಮಾಡಿ ಆದಾಯ ಪಡೆಯುತ್ತಿದೇನೆ ಎಂದರೆ ಸರಿಯಲ್ಲ. ಹಾಗಾಗಿ ನಮಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸುಳು ಪ್ರಮಾಣ ಪತ್ರ ಸಲಿಸಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಓ. ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು,
ರಾಯಚೂರು.